ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಬಾಲಕರ ವಿದ್ಯಾರ್ಥಿನಿಲಯಗಳಿಗೆ ಮೂಲ ಸೌಕರ್ಯ ಒದಗಿಸುವ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-

267 (405) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿನ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಕಾಲೇಜಿನ ಬಾಲಕರ ವಿದ್ಯಾರ್ಥಿನಿಲಯಗಳಿಗೆ ಮೂಲ

ಸೌಕರ್ಯಗಳನ್ನು ಒದಗಿಸಲು ಯಾವಾಗ ಕಾರ್ಯಾದೇಶ ನೀಡಲಾಯಿತು ; ಇದಕ್ಕೆ ನೀಡಿದ ಹಣವೆಷ್ಟು ;

(ಆ) ಈ ಸಂಬಂಧ ಕಿಯೋನಿಕ್ಸ್‌ಗೆ ಯಾವ ದಿನಾಂಕದಂದು ಚೆಕ್ ಸಮೇತ ಹಣ ಪಾವತಿ ಮಾಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಇ) ದಿನಾಂಕ : 23-04-2020 ರಂದು ಕಾರ್ಯಾದೇಶ ನೀಡಿ ದಿನಾಂಕ : 27-04-2020 ರಂದು ಚೆಕ್ ಮೂಲಕ ಹಣ ಪಾವತಿಸಿರುವುದಕ್ಕೆ ಕಾರಣಗಳೇನು ; ಕಾಮಗಾರಿ ನಿರ್ವಹಣೆ ಮಾಡದೆ ಹಣ ಬಿಡುಗಡೆ ಮಾಡಿರುವುದು ಸರಿಯೇ ;

(ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?